ಸಾರ್ವಜನಿಕ ಶಿಕ್ಷಣ ಇಲಾಖೆ
**ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಅಂಗೀಕರಣ ಪರಿಷತ್ತು**
**Karnataka School Quality Assessment & Accreditation Council**
ಕೆ.ಎಸ್.ಇ.ಇ.ಬಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-03. ದೂರವಾಣಿ ಸಂಖ್ಯೆ: 23341615, 23562283, 29720300
ಫ್ಯಾಕ್ಸ್: 080-23347670, e-mail: ksqaacbangalore@gmail.com & ksqaacbengaluru@gmail.com

ಸಂಖ್ಯೆ: ಕೆ4/ಕೆ.ಎಸ್.ಕ್ಯು.ಎ.ಎ.ಸಿ/ಶಾಲಾಸಿದ್ಧಿ/30/2020-21 ದಿನಾಂಕ: 19-09-2020

## ಜ್ಞಾಪನ

ವಿಷಯ:- 2018-19 ನೇ ಸಾಲಿನ 'ಶಾಲಾಸಿದ್ಧಿ' ಕಾರ್ಯಕ್ರಮದ ಅನುಪಾಲನಾ ವರದಿಯ ನಮೂನೆಯ ಕುರಿತು.
ಉಲ್ಲೇಖ:- ಈ ಕಛೇರಿ ಪತ್ರ ಸಮಸಂಖ್ಯೆ ದಿನಾಂಕ: 04-09-2020

~*~*~*~

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ 2020-21 ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಶಾಲೆಗಳಲ್ಲಿ ಶಾಲಾಸಿದ್ಧಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದ್ದು, ಈ ಕುರಿತಂತೆ ಪ್ರಸ್ತುತ ವರ್ಷದ ಅನುಷ್ಠಾನ ಪ್ರಕ್ರಿಯೆಯ ಭಾಗವಾಗಿ, 2018-19 ನೇ ಸಾಲಿನಲ್ಲಿ ಸ್ವ-ಮೌಲ್ಯಮಾಪನ ಕೈಗೊಂಡ ಶಾಲೆಗಳ ಸ್ವ-ಮೌಲ್ಯಮಾಪನ ವರದಿಯ ಆಧಾರದ ಮೇಲೆ ಅನುಪಾಲನಾ ವರದಿಯನ್ನು ಸಿದ್ಧಪಡಿಸಿ ಸಲ್ಲಿಸುವಂತೆ ತಿಳಿಸಲಾಗಿತ್ತು. ಸದರಿ ವರದಿಯನ್ನು ಸಲ್ಲಿಸಲು ಸುಲಭವಾಗುವಂತೆ ನಮೂನೆಯನ್ನು ಸಿದ್ಧಪಡಿಸಲಾಗಿದ್ದು, ಶಾಲೆಗಳಿಂದ ಪಡೆದ ವರದಿಯನ್ನು ಜಿಲ್ಲಾ ಹಂತದ ಕ್ರೋಢೀಕೃತ ನಮೂನೆ-3 ರಲ್ಲಿ ಮಾತ್ರ ಈ ಕಛೇರಿಗೆ **ದಿನಾಂಕ: 05.10.2020 ರೊಳಗೆ** ಈ ಕಛೇರಿಯ ಇ-ಮೇಲ್ ವಿಳಾಸ: ksqaacbangalore@gmail.com ಕ್ಕೆ ಕಳುಹಿಸುವುದು. ಉಳಿದ ನಮೂನೆ – 1 'ಶಾಲಾ ಹಂತದ ನಮೂನೆ' ಮತ್ತು ನಮೂನೆ-2 'ಜಿಲ್ಲಾ ಹಂತದ ನಮೂನೆ'ಯ ಮಾಹಿತಿಗಳನ್ನು ಡಯಟ್ ಹಂತದಲ್ಲಿಯೇ ಕಾಯ್ದಿರಿಸಿ ಅಧಿಕಾರಿಗಳು ಭೇಟಿ ನೀಡಿದ ಸಂದರ್ಭದಲ್ಲಿ ಪ್ರಸ್ತುತ ಪಡಿಸುವುದು.

**ನಮೂನೆಯ ವಿವರಗಳು:-**

1. **ನಮೂನೆ-1 – 'ಶಾಲಾ ಹಂತದ ನಮೂನೆ'** – ಈ ನಮೂನೆಯಲ್ಲಿ ಶಾಲೆಯ ಮುಖ್ಯ ಶಿಕ್ಷಕರು 2018-19 ನೇ ಸಾಲಿನ ಶಾಲಾಸಿದ್ಧಿ ಕಾರ್ಯಕ್ರಮದಲ್ಲಿನ ಮಾನದಂಡಗಳನ್ನಾಧರಿಸಿ ಕೈಗೊಂಡ ಶಾಲಾ ಸ್ವ-ಮೌಲ್ಯಮಾಪನದ ವರದಿಯ ಆಧಾರದ ಮೇಲೆ ಶಾಲೆಯು ಪ್ರಸ್ತುತ ಗುರುತಿಸಿಕೊಂಡಿರುವ ಹಂತಗಳ ಮಾಹಿತಿಗಳನ್ನು ಭರ್ತಿ ಮಾಡಿ ಜಿಲ್ಲಾ ಹಂತದಲ್ಲಿ ಡಯಟ್‌ಗಳಿಗೆ ಸಲ್ಲಿಸುವುದು.
2. **ನಮೂನೆ-2 – 'ಜಿಲ್ಲಾ ಹಂತದ ನಮೂನೆ'** – ಈ ನಮೂನೆಯಲ್ಲಿ ಶಾಲೆಗಳಿಂದ ಪಡೆದ ಶಾಲಾ ಸ್ವ-ಮೌಲ್ಯಮಾಪನದ ವರದಿಯ ಆಧಾರದ ಮೇಲೆ ಮಾಹಿತಿಯನ್ನು ಜಿಲ್ಲಾ ಹಂತದಲ್ಲಿ ಕ್ರೋಢೀಕರಿಸಬೇಕು. ಈ ನಮೂನೆಯಲ್ಲಿ ಅಂಕಿ ಸಂಖ್ಯೆಗಳನ್ನು ಲೆಕ್ಕಹಾಕಲು ಸುಲಭವಾಗುವಂತೆ ಮಾಡಲು Formula ವನ್ನು ಅಳವಡಿಸಲಾಗಿದೆ. ಆದ್ದರಿಂದ ಈ Excel Sheet ನಲ್ಲಿಯೇ ಮಾಹಿತಿಯನ್ನು ಭರ್ತಿ ಮಾಡುವುದು. ಈ ನಮೂನೆಯಲ್ಲಿ ದಾಖಲಿಸಿದ ಅಂಕಿ ಸಂಖ್ಯೆಗಳು ನಮೂನೆ-3 'ಜಿಲ್ಲಾ ಹಂತದ ಕ್ರೋಢೀಕೃತ ನಮೂನೆ' ಯಲ್ಲಿ ಬಂದು ದಾಖಲಾಗುತ್ತದೆ.

3. **ನಮೂನೆ-3 – 'ಜಿಲ್ಲಾ ಹಂತದ ಕ್ರೋಢೀಕೃತ ನಮೂನೆ'** – ಈ ನಮೂನೆಯಲ್ಲಿ ಜಿಲ್ಲೆಯ ಶಾಲಾಸಿದ್ಧಿ ಕಾರ್ಯಕ್ರಮದಲ್ಲಿ ಸ್ವ-ಮೌಲ್ಯಮಾಪನಕ್ಕೆ ಒಳಪಟ್ಟ ಒಟ್ಟು ಶಾಲೆಗಳ ಸಂಖ್ಯೆ ಹಾಗೂ ಶಾಲೆಗಳು ಪ್ರಸ್ತುತ ಗುರುತಿಸಿಕೊಂಡಿರುವ ಹಂತಗಳನ್ನು ಪರಿಶೀಲಿಸಿಕೊಂಡು ಈ ನಮೂನೆಯನ್ನು ಮಾತ್ರ **ದಿನಾಂಕ: 05.10.2020 ರೊಳಗೆ** ಈ ಕಛೇರಿಗೆ ಇ-ಮೇಲ್ ಮೂಲಕ ಕಳುಹಿಸುವುದು.

19/9/20
ಉಪನಿರ್ದೇಶಕರು
ಕೆ.ಎಸ್.ಕ್ಯು.ಎ.ಎ.ಸಿ.

ಪ್ರತಿಯನ್ನು:-

1. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು ರವರಿಗೆ ಗೌರವಪೂರ್ವಕವಾಗಿ ಮಾಹಿತಿಗಾಗಿ.
2. ಜಿಲ್ಲಾ ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಸೂಕ್ತ ಕ್ರಮಕ್ಕಾಗಿ.
3. ಪ್ರಾಂಶುಪಾಲರು ಹಾಗೂ ಪದನಿಮಿತ್ತ ಉಪನಿರ್ದೇಶಕರು (ಅಭಿವೃದ್ಧಿ) ರವರಿಗೆ ಸೂಕ್ತ ಕ್ರಮಕ್ಕಾಗಿ.
4. ಸಂಬಂಧಿಸಿದ ಶಾಲಾಸಿದ್ಧಿ ನೋಡಲ್ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
5. ಕಛೇರಿ ಪ್ರತಿ.